ಮತ್ತು ಆದಷ್ಟು ಜಾಗ್ರತೆ ಸರ್ವೆ ಮಾಡಿಸುತ್ತೇನೆ. ಏನಾದ್ರೂ ವಿಲೇಜ್ ಎಂದು ಡಿಕ್ಲೇರ್ ಮಾಡಲು ಕಾನೂನು ಬದಲಾವಣೆ ಮಾಡುವುದಕ್ಕೆ ಅವಕಾಶವಿದ್ದರೆ ಅದನ್ನು ಕೂಡ ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ರಾಮಪ್ಪ.—ಮಾನ್ಯ ಅಧ್ಯಕ್ಷರೇ ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ಒಂದೇ ವಿಲೇಜ್ ಎರಡು ತಾಲ್ಲೂಕುಗಳಿಗೆ ಸೇರಿರುತ್ತದೆ. ನೆಲ್ಲೂರೂ ತಾಲ್ಲೂಕಿಗೂ ಸೇರಿದೆ ಮತ್ತು ಕಂಪ್ಲಿಗೂ ಸೇರಿದೆ. ಆದ್ದರಿಂದ ಇದನ್ನು ಒಂದೇ ತಾಲ್ಲೂಕಿಗೆ ಸೇರಿಸಲು ಬರುತ್ತದೆಯೇ ಎಂದು ಕೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಮ್ಮ ಸಲಹೆಯನ್ನು ಪರಿಶೀಲನೆ ಮಾಡುತ್ತೇನೆ.

ಸಹಕಾರಿ ರಂಗದಡಿಯಲ್ಲಿರುವ ಒಟ್ಟಿಗಿರಣಿಗಳು

೭೪೪. ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಕೈಗಾರಿಕಾ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಹಕಾರಿ ಕ್ಷೇತ್ರದಲ್ಲಿ ಬರುವ ಜವಳಿ ಗಿರಣಿಗಳು ತೀವ್ರವಾದ ಆರ್ಥಿಕ ಬಿಕ್ಕಟನ್ನು ಮತ್ತು ಹತ್ತಿಯ ರಂಗಗಳಲ್ಲಿ ವಿರೋಧಿತಗಳನ್ನು ಎದುರಿಸುತ್ತಿರುವುದು ನಿಜವೇ?

ಆ) ಬಿಜಾಪುರ ಮತ್ತು ರಾಯಚೂರು ಗಿರಣಿಗಳು ಆಡಳಿತಾಧಿಕಾರಿಯಿಂದ ನಡೆಸಲ್ಪಡುತ್ತಿರುವುದು ನಿಜವೇ? ಹಾಗಿದ್ದಲ್ಲಿ ಅದಕ್ಕೆ ಕಾರಣಗಳು.

ಇ) ಆ ಗಿರಣಿಗಳನ್ನು ಸಹಕಾರಿ ಕ್ಷೇತ್ರಕ್ಕೆ ಮರಳಿ ಒಪ್ಪಿಸುವ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳು.

ಈ) ಆ ಗಿರಣಿಗಳನ್ನು ಪುನರುಜ್ಜೀವನಗೊಳಿಸಲು ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮವು ಒದಗಿಸುವ ರೂ. ೫೦.೦೦ ಲಕ್ಷ ಮಾರ್ಜಿನ್ ಮನಿ ಸೌಲಭ್ಯವನ್ನು ಸರ್ಕಾರವು ಪಡೆದಿದೆಯೇ?

ಉ) ಹಾಗಿದ್ದಲ್ಲಿ ತಡವಾಗಿರುವುದಕ್ಕೆ ಕಾರಣಗಳು.

ಶ್ರೀ ಆರ್. ಬಿ. ಪೋತ್‌ದಾರ್ (ಕೈಗಾರಿಕಾ ಸಹಕಾರ ಮಂತ್ರಿಗಳು).—

ಅ) ನಿಜ.

ಆ) ನಿಜ. ಬಿಜಾಪುರ ಮತ್ತು ರಾಯಚೂರು ಸಹಕಾರಿ ನೂಲಿನ ಗಿರಣಿಗಳ ಆಡಳಿತ ಮಂಡಳಿಗಳು ಗಂಭೀರ ಸ್ವರೂಪದ ಅಕ್ರಮಗಳನ್ನು ಎಸಗಿದ್ದರಿಂದ, ರಾಯಚೂರು ಸಹಕಾರಿ ನೂಲಿನ ಗಿರಣಿಗೆ ಆಡಳಿತಾಧಿಕಾರಿಗಳನ್ನು ಮತ್ತು ಬಿಜಾಪುರ ಸಹಕಾರಿ ನೂಲಿನ ಗಿರಣಿಗೆ ವಿಶೇಷಾಧಿಕಾರಿಗಳನ್ನು ನೇಮಿಸಲಾಗಿದೆ.

ಇ) ಸದ್ರಿ ನೂಲಿನ ಗಿರಣಿಗಳನ್ನು ಕರ್ನಾಟಕ ರಿಲೀಫ್ ಅಂಡರ್‌ಟೇಕಿಂಗ್ (ಸ್ಪೆಷಲ್ ಪ್ರಾವಿಷನ್) ಆಕ್ಟ್ ೧೯೭೭ರ ಅನ್ವಯ ರೋಗಗ್ರಸ್ತ ಘಟಕಗಳನ್ನಾಗಿ (ಸಿಕ್ ಯುನಿಟ್ಸ್) ಸಾರಿದ್ದು, ಆಡಳಿತಾಧಿಕಾರಿ/ವಿಶೇಷಾಧಿಕಾರಿಗಳ ಆಡಳಿತದಲ್ಲಿ ಸದರಿ ಗಿರಣಿಗಳನ್ನು ನಡೆಸಲಾಗುತ್ತಿದೆ.

ಈ) ಇಲ್ಲ.

ಉ) ಎರಡೂ ನೂಲಿನ ಗಿರಣಿಗಳು ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮವು ಮಾರ್ಜಿನ್ ಮನಿ ಸೌಲಭ್ಯ ಕೊಡುವಾಗ್ಗೆ ವಿಧಿಸಿದ ಷರತ್ತುಗಳನ್ನು ನೆರವೇರಿಸಲೇ ಇದ್ದುದರಿಂದ ಮತ್ತು ಅವು ಅತಿಯಾದ ಹಾನಿಯಲ್ಲಿ ನಡೆಯುತ್ತಿರುವುದರಿಂದ.

(ಶ್ರೀ ಆರ್. ಬಿ. ಪೋತ್‌ದಾರ್, ಕೈಗಾರಿಕಾ ಸಹಕಾರಿಗಳ ಸಚಿವರು ಪ್ರಶ್ನೆ ಮತ್ತು ಉತ್ತರವನ್ನು ಓದುತ್ತಿರಬೇಕಾದರೆ ಪ್ರೇಕ್ಷಕರ ಗ್ಯಾಲರಿಯಿಂದ ಪೋತದಾರ್‌ರವರಿಗೆ ಧಿಕ್ಕಾರ, ರಾಮಾಕೃಷ್ಣ ಹೆಗಡೆ ಯವರಿಗೆ ಜಯವಾಗಲಿ ಎಂದು ಕೂಗುತ್ತಾ, ಒಬ್ಬ ವ್ಯಕ್ತಿ ಒಂದು ಚೀಟಿಯನ್ನು ಎಸೆದನು)

ಅಧ್ಯಕ್ಷರು.—ಯಾರು ಗಲಾಟೆ ಮಾಡಬಾರದು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ ಇದು ಮಾನ್ಯ ಪೋತದಾರ್‌ರವರ ಅರೇಂಜ್‌ಮೆಂಟೋ ಅಥವಾ ಮಾನ್ಯ ರಾಮಕೃಷ್ಣ ಹೆಗಡೆಯವರ ಅರೇಂಜ್‌ಮೆಂಟೊ?

ಶ್ರೀ ರಾಮಕೃಷ್ಣ ಹೆಗಡೆ.—ಈ ರೀತಿ ಅರೇಂಜ್‌ಮೆಂಟ್ ಮಾಡುವುದರಲ್ಲಿ ತಾವು ಬಹಳ ನಿಷ್ಣಾತರು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವರು ಮಾನ್ಯ ಪೋತದಾರ್‌ರವರ ಶಿಷ್ಯರು ಇದ್ದಹಾಗೆ ಕಾಣುತ್ತದೆ.

ಶ್ರೀ ಆರ್. ಬಿ. ಪೋತದಾರ್.—ಯಾರು ಮಾಡಿದರು ಎಂಬುದು ತಮಗೆ ಗೊತ್ತಿದೆ.

ಶ್ರೀ ಕೆ. ಹೆಚ್. ಪಾಟೀಲ್.—ತಾವು ನಿಜವನ್ನು ಒಪ್ಪಿದ್ದೀರಿ. ಆದರೆ ಹಣಕಾಸಿನ ತೊಂದರೆ ಇರುವುದರಿಂದ ಸಹಕಾರಿ ಮಿಲ್‌ಗಳಿಗೆ ಇತರೆ ರಾಜ್ಯಗಳು ಯಾವ ರೀತಿ ಸೌಕರ್ಯ ಕೊಟ್ಟಿವೆ ಆರೀತಿ ಸೌಕರ್ಯ ಕೊಡುವುದಕ್ಕೆ ಸರ್ಕಾರ ಏನಾದರೂ ಪ್ರಯತ್ನ ಮಾಡುತ್ತಿದೆಯೇ? ಎರಡು ಮಿಲ್‌ಗಳೂ ಎನ್‌ಸಿಡಿಸಿಯಿಂದ ಹಣ ತೆಗೆದುಕೊಳ್ಳಲಿಕ್ಕೆ ಅವು ಡಿಸ್‌ಕ್ವಾಲಿಫೈ ಆಗಿವೆ ಎಂದು ಹೇಳಿದ್ದೀರಿ, ಅಲ್ಲಿ ನಾಮಿನೇಟೆಡ್ ಮೆಂಬರ್ ಇರುವುದರಿಂದ ಹಣ ಕೊಡಬಾರದೆಂದು ಮಾಡಿದ್ದಾರೆ. ಆದ್ದರಿಂದ ಅದನ್ನು ಬದಲಾವಣೆ ಮಾಡಿ ಎಲೆಕ್ಟೆಡ್ ಮೆಂಬರ್ಸ್ ಅನ್ನು ಹಾಕಿ ಎನ್‌ಸಿಡಿಸಿಯಿಂದ ಹಣ ಸಿಗುವ ವ್ಯವಸ್ಥೆ ಮಾಡುತ್ತೀರಾ? ಎನ್‌ಸಿಡಿಸಿ ಹಣ ಸಿಗಬೇಕಾದರೆ ನಮ್ಮ ರಾಜ್ಯ ಸರ್ಕಾರ ೫೦ ಪರ್ಸೆಂಟ್ ಹಣವನ್ನು ಷೇರ್ ಕ್ಯಾಪಿಟಲ್‌ಆಗಿ ಕೊಡಬೇಕಾಗುತ್ತದೆ. ಅದಕ್ಕೆ ಬಡ್ಜೆಟ್ಟಿನಲ್ಲಿ ಪ್ಲಾನಿಂಗ್ ಮಿನಿಸ್ಟರ್ ಏನಾದರೂ ಪ್ರಾವಿಷನ್ ಮಾಡಿದ್ದಾರೆಯೆ?

ಶ್ರೀ ಆರ್. ಬಿ. ಪೋತ್‌ದಾರ್.—ಅದಕ್ಕೋಸ್ಕರ ೧೬-೧೨-೮೭ರಂದು ಒಂದು ಕ್ಯಾಬಿನೆಟ್ ಸಬ್-ಕಮಿಟಿಯನ್ನು ಮಾಡಲಾಗಿದೆ. ಸಿಕ್ ಯೂನಿಟ್ಸ್ ಏನಿವೆ ಅವನ್ನು ಸರಿಪಡಿಸಲಿಕ್ಕೆ ಹೊರಟಿದ್ದೇವೆ. ನಾವು ಇನ್ನೂ ಒಂದು ಮೀಟಿಂಗನ್ನು ಇಷ್ಟರಲ್ಲಿಯೆ ಕರೆಯಲಿದ್ದೇವೆ. ಅವನ್ನು ಸರಿಪಡಿಸಲಿಕ್ಕೆ ಬರುತ್ತದೆಯೇ ಎಂದು ವಿಚಾರ ನಡೆಸಿದ್ದೇವೆ ಮುಂದಿನ ಬಡ್ಜೆಟ್ಟಿನಲ್ಲಿ ಹಣ ಒದಗಿಸುವ ವಿಚಾರದಲ್ಲಿ ಕನ್ಸಿಡರ್ ಮಾಡಲಿಕ್ಕೆ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ.

ಅಂತರಜಾತಿಯ ವಿವಾಹಗಳಿಗೆ ಪ್ರೋತ್ಸಾಹ ಕೊಡುವ ಬಗ್ಗೆ

೫೧೧. ಶ್ರೀಮತಿ ಸುಮಾ ವಸಂತ್ (ವೀರಾಜಪೇಟೆ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅಂತರ್‌ಜಾತೀಯ ವಿವಾಹಗಳಿಗೆ ಸರ್ಕಾರದವರ ಪುರಸ್ಕಾರ ಹಾಗೂ ಧನಸಹಾಯದ ಪ್ರೋತ್ಸಾಹದ ಕಾರ್ಯಕ್ರಮವಿದೆಯೇ?

ಆ) ಅಂತರ್‌ಜಾತೀಯ ವಿವಾಹ ಎಂದರೆ ಸರ್ಕಾರದ ದೃಷ್ಟಿಯಲ್ಲಿ ಹರಿಜನರು ಅನ್ಯ ಜಾತಿಗೆ ಮದುವೆಯಾದರೆ ಮಾತ್ರ ಎಂಬ ಅಭಿಪ್ರಾಯವಿದೆಯೇ?

ಇ) ಸರ್ಕಾರದ ಆದೇಶ ಸಂಖ್ಯೆ ಎಸ್‌ಡಬ್ಲ್ಯೂಎಲ್ ೧೪೮ ಎಸ್‌ಎಡಿ ೭೭, ತಾರೀಖು ೨೪-೧೦-೮೦ರಂದು ಹೊರಡಿಸಿದ ಈ ಆದೇಶ ಅನ್ವಯ ಯಾವ ಕೋಮಿನವರಿಗೆ ಅದು ಅನ್ವಯಿಸುತ್ತದೆ?

ಈ) ಗಿರಿಜನರು ಬೇರೆ ಜನಾಂಗದವರನ್ನು ಮದುವೆಯಾದರೆ ಅದು ಅಂತರ್‌ಜಾತೀಯ ಮದುವೆ ಆಗುವುದಿಲ್ಲವೇ?

ಉ) ಅಂತಹವರಿಗೆ ಈ ಸರ್ಕಾರದ ಆದೇಶ ಅನ್ವಯಿಸುವುದಿಲ್ಲವೇ?

ಊ) ಸರ್ಕಾರ ಹರಿಜನರಿಗೆ ಕಲ್ಪಿಸಿದಂತೆ, ಗಿರಿಜನರಿಗೂ ಹೊಂದಿಕೊಂಡಿರುವಾಗ ಈ ಸೌಲಭ್ಯ ಗಿರಿಜನರಿಗೆ ಅನ್ವಯಿಸುವುದಿಲ್ಲದಿರುವುದು ಸರಿಯೇ, ಇದರ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು?

ಶ್ರೀ ಜಿ. ಬಸವಣ್ಣೆಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಇದೆ.